ಬೆಂಗಳೂರಿನ ಕನ್ನಡ ಕ್ಯಾಥಲಿಕರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳ

೧೭೨ ಶ್ರೀ ಪಾಟಾಳ್ ನಾಗರಾಜ್ (ಚಾಮರಾಜನಗರ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಬೆಂಗಳೂರಿನ ಕನ್ನಡ ಕ್ಯಾಥಲಿಕರ ಮೇಲೆ ನಿರಂತರವಾಗಿ ದೌರ್ಜನ್ಯಗಳು ನಡೆಯುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ :

ಆ) ವಿನಾಕಾರಣ ಕನ್ನಡ ಕ್ಯಾಥಲಿಕರ ಮೇಲೆ ಪೋಲೀಸರು ಮೊಕದ್ದಮೆಗಳನ್ನು ಹೂಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—

ಅ) ಇಲ್ಲ.
ಆ) ಇಲ್ಲ.

ರೆವಿನ್ಯೂ ನಿವೇಶನಗಳನ್ನು ಸಕ್ರಮಗೊಳಿಸುವ ಬಗ್ಗೆ

೫೩೦ ಶ್ರೀ ರಾಮಲಿಂಗಾರೆಡ್ಡಿ (ಜಯನಗರ).—ಮಾನ್ಯ ಕಂದಾಯ ಮತ್ತು ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ;

ಅ) ರೆವಿನ್ಯೂ ನಿವೇಶನಗಳನ್ನು ಸರ್ಕಾರದವರು ಸಕ್ರಮಗೊಳಿಸುವರೆ ;

ಆ) ಹಾಗಿದ್ದಲ್ಲಿ ಅವುಗಳನ್ನು ಯಾವಾಗ ಸಕ್ರಮಗೊಳಿಸಲಾಗುವುದು ?

ಶ್ರೀ ಕೆ. ಹೆಚ್. ಪಾಟೀಲ್ (ಕಂದಾಯ ಮತ್ತು ಕಾರ್ಮಿಕ ಸಚಿವರು).—

ಅ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ

ಆ) ಕರ್ನಾಟಕ ಭೂ ಕಂದಾಯ ಕಾಯಿದೆ ಸೂಕ್ತ ತಿದ್ದುಪಡಿಯನ್ನು ಮಾಡಿದ ನಂತರ ಸಕ್ರಮಗೊಳಿಸಲಾಗುವುದು.

ನಗರದಲ್ಲಿ ಖಾಸಗಿ ಏಜೆನ್ಸಿಗಳು ಟ್ಯಾಂಕರ್‌ಗಳ ಮೂಲಕ ಕಲ್ಮಶವಾದ ನೀರನ್ನು ಸರಬರಾಜು ಮಾಡುತ್ತಿರುವುದನ್ನು ತಡೆಗಟ್ಟುವ ಬಗ್ಗೆ

೬೫೦. ಶ್ರೀ ಎಂ. ನಾರಾಯಣ ಸ್ವಾಮಿ (ಬೇತಮಂಗಲ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಕೆಲವು ಖಾಸಗಿ ಏಜೆನ್ಸಿಗಳು ಸಣ್ಣ ಟ್ಯಾಂಕರ್‌ಗಳ ಮೂಲಕ ಕುಡಿಯುವ ನೀರೆಂದು ಹೇಳಿ ಹೋಟೆಲ್‌ಗಳಿಗೆ ಹಾಗೂ ಮನೆಗಳಿಗೆ ಸರಬರಾಜು ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಬಂದಿದ್ದರೆ ಇವರುಗಳು ಸರಬರಾಜು ಮಾಡುತ್ತಿರುವ ನೀರು ಶುದ್ಧ ನೀರಾಗಿರದೆ ಕಲುಷಿತ ನೀರಾಗಿದ್ದು ಆ ನೀರನ್ನು ಕುಡಿದು ಸಾಂಕ್ರಾಮಿಕ ರೋಗಗಳು ಬರುತ್ತಿದ್ದು ಇದನ್ನು ತಡೆಗಟ್ಟಲು ಸರ್ಕಾರವು ಕೈಗೊಂಡ ಕ್ರಮಗಳೇನು ?

ಇ) ಈ ಖಾಸಗಿ ಏಜನ್ಸಿಗಳು ನೀರು ಸರಬರಾಜು ಮಾಡಲು ಮಹಾನಗರಪಾಲಿಕೆಯ ಅಥವಾ ಜಲಮಂಡಳಿಯು ಅನುಮತಿ ಪಡೆದಿದ್ದಾರೆಯೇ?

ಈ) ಈ ರೀತಿಯ ಕಲುಷಿತ ನೀರು ಪರವಾನಗಿ ಇಲ್ಲದೆ ಸರಬರಾಜನ್ನು ಮಾಡುತ್ತಿರುವುದನ್ನು ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಉ) ಹಾಗಿದ್ದಲ್ಲಿ ಈ ರೀತಿ ಕಲುಷಿತ ನೀರಿನ ಸರಬರಾಜನ್ನು ತಡೆಗಟ್ಟಲು ಬೆಂಗಳೂರು ಜಲಮಂಡಳಿಯು ಸಣ್ಣ ಟ್ಯಾಂಕರುಗಳನ್ನು ಕೊಂಡು ಅದರ ಮೂಲಕ ರಿಯಾಯಿತಿದರದಲ್ಲಿ ಸಾರ್ವಜನಿಕರಿಗೆ ಹಾಗೂ ಹೋಟೆಲ್‌ಗಳಿಗೆ ನೀರು ಸರಬರಾಜು ಮಾಡುವಂತೆ ಕ್ರಮ ಕೈಗೊಳ್ಳುವುದೇ?